**ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.**

**ಉಪಸ್ಥಿತರುಃ- ಶ್ರೀ ರಾಹುಲ ಚಾಂಭಾರ ಬಿ.ಎ.ಎಲ್.ಎಲ್.ಬಿ**
**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ,**

**ಸಿ.ಸಿ. ನಂಃ 51/2020**

**ಫಿರ್ಯಾಧಿದಾರಃ ಕರ್ನಾಟಕ ಸರ್ಕಾರದ ಪರವಾಗಿ ಸೈದಾಪೂರ ಪೊಲೀಸ್ ಠಾಣೆ**

**// ವಿರುದ್ಧ //**

**ಆರೋಪಿ ಃ ಚೀರಂಜಿವಿ**

**ದೋಷಾರೋಪಣೆ**

| | |
|---|---|
| ಆರೋಪಿ.1 | ಚೀರಂಜಿವಿ ತಂದೆಃ ಹಣಮಂತಪ್ಪ, ವಃ 29 ವರ್ಷ,<br>ಉಃ ಕೂಲಿ ಕೆಲಸ ಸಾಃ ಬಾಡಿಯಾಳ ತಾಃ ಜಿಃ ಯಾದಗಿರಿ. |

ದಿನಾಂಕಃ 08-09-2019 ರಂದು 07.30 ಪಿ.ಎಂ ಸುಮಾರಿಗೆ ಸೈದಾಪೂರ ಪೋಲಿಸ ಠಾಣೆಯ ಹದ್ದಿಯ ಪೈಕಿ ಬರುವ ಬಾಡಿಯಾಳ ಗ್ರಾಮದ ಮರಾಠ ಅಂಗಡಿಯ ಹತ್ತಿರ ಆರೋಪಿಯದ ನೀನು ಸರ್ಕಾರದಿಂದ ಯಾವುದೇ ಪರವಾನಿಗೆಯನ್ನು ಪಡೆಯದೇ ಅನಧಿಕೃತವಾಗಿ ಒಂದು ರಟ್ಟಿನ ಬಾಕ್ಸನಲ್ಲಿ 6 ಕಿಂಗ್ ಫಿಶರ್ 650 ಎಮ್ ಎಲ್ ಬಾಟಲುಗಳಿದ್ದು, 2. 6 ಕಿಂಗ್ ಪಿಶರ್ 650 ಎಮ್ ಎಲ್ ಬಾಟಲುಗಳಿದ್ದು, 3. ಓರಿಜನಲ್ ಚೋಯಿಸ್ 90 ಎಮ್. ಎಲ್. 39 ಟೆಟ್ರಾ ಪಾಕೇಟ್ಗಳನ್ನು, ಸಂಗ್ರಹಿಸಿ ಇಟ್ಟಿದ್ದು, ಈ ಮೂಲಕ ನೀನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

2. ಎರಡನೆಯದಾಗಿ ಈ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿಯಾದ ನೀನು ಮದ್ಯದ ಬಾಟಲಿಗಳನ್ನು ಅಕ್ರಮವಾಗಿ ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದು ಈ ಮೂಲಕ ನೀನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

**(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಇಂದು ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿಗೆ ಓದಿ ಹೇಳಲಾಯಿತು.)**

(ಶ್ರೀ ರಾಹುಲ ಚಾಂಭಾರ)
ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು ಯಾದಗಿರಿ